**PW_1**

# 1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಚಿತ್ರದುರ್ಗ

## ಸಿ.ಸಿ.2350/2021

| | | |
|---|---|---|
| ಸಾಕ್ಷಿದಾರರ ಹೆಸರು | ಪ್ರವೀಣ ಎಮ್ | PW:6 |
| ತಂದೆಯ ಹೆಸರು | ಮಂಜುನಾಥ ಪಿ ಹೆಚ್ | CW:19 |
| ವಯಸ್ಸು | 39 ವರ್ಷ | ಪ್ರಮಾಣ ವಚನ ಬೋದಿಸಿದ |
| ಉದ್ಯೋಗ | ಖಾಸಗಿ ಕಂಪನಿಯಲ್ಲಿ ಕೆಲಸ | ದಿನಾಂಕ : 07/12/2024 |
| ವಾಸ | ಚಿತ್ರದುರ್ಗ | |

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. 2012 ನೇ ಇಸವಿಯಲ್ಲಿ ನಾನು ಐ ಸಿ ಐ ಸಿ ಐ ಬ್ಯಾಂಕ್ ಚಿತ್ರದುರ್ಗದಲ್ಲಿ ಸೇಲ್ಸ ಆಪೀಸರ್ ಆಗಿ ಕೆಲಸ ಮಾಡುತಿದ್ದೆನು. ನನ್ನ ಜೊತೆ ಜಯ್ಯಣ್ಣ ಹಾಗೂ ಅನಿತಾ ರವರು ಕೆಲಸ ಮಾಡುತಿದ್ದರು. ಪ್ರತಿದಿನ ಬೆಳಗ್ಗೆ 9 ಗಂಟೆಗೆ ಹಾಜರಾತಿ ಹಾಕಿ ನಂತರದಲ್ಲಿ ನಾನು ಪೀಲ್ಡ ಗೆ ಹೋಗಿ ಮಾರ್ಕೆಟ್ ಗೆ ತೆರಳಿ ಗ್ರಾಹಕರನ್ನು ಪರಿಚಯಿಸಿಕೊಂಡು ಅಕೌಂಟ್ ಓಪನ್ ಮಾಡಿಸಿ ಎಪ್ ಡಿ , ಆರ್ ಡಿ ಇನ್ಸುರೆನ್ಸ ಮಾಡಿಸುವ ಕೆಲಸ ನನ್ನದಾಗಿತ್ತು. ನಂತರ ಸಂಜೆ 5.30 ಯಿಂದ 6.30 ತನಕ ಬ್ಯಾಂಕ್ ನಲ್ಲಿ ಇದ್ದು ವಾಪಸ್ಸು ಮನೆಗೆ ಹೋಗುತಿದ್ದೆನು. ನಾನು ನನ್ನ ಪ್ರೊಗ್ರೆಸ್ ರಿಪೊರ್ಟನ್ನು ಮ್ಯಾನೇಜರ್ ರವರಿಗೆ ಪ್ರತಿದಿನ ನೀಡುತಿದ್ದೆನು. ನಾನು ನಟರಾಜ ಎಂಬ ಚಿತ್ರದುರ್ಗದ ವಾಸಿ ಯಾದ ವ್ಯಕ್ತಿಗೆ ಸೇವಿಂಗ್ ಅಕೌಂಟನ್ನು ಓಪನ್ ಮಾಡಿಸಿದ್ದೆನು ಅಕೌಂಟ ನಂಬರ್ ಹೇಳಲು ಆಗುವುದಿಲ್ಲ. 5 ನೇ ಆರೋಪಿಗೆ ಸದರಿ ವಿಷಯದ ಬಗ್ಗೆ ತಿಳಿಸುತಿದ್ದೆನು. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಏನು ಕೆಲಸ

ಮಾಡುತಿದ್ದರು ನನಗೆ ಗೊತ್ತಿಲ್ಲ ಆದರೆ ಅವರನ್ನು ನೋಡಿರುತ್ತೇನೆ. ನಟರಾಜ ಎನ್ನುವ ಗ್ರಾಹಕ ಚಿನ್ನದ ನಾಣ್ಯವನ್ನು ಕೊಂಡುಕೊಳ್ಳಲು ಬಂದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. 1 , 2 ಮತ್ತು 5 ನೇ ಆರೋಪಿ ಚಿನ್ನದ ನಾಣ್ಯ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಅವರು ರೂ. 1,81,500/ ರೂಗೆ ಚಿನ್ನದ ನಾಣ್ಯ ಮಾರಾಟ ಮಾಡಿದರು ಆ ವಿಷಯ ನನಗೆ ಗೊತ್ತಿಲ್ಲ. 1, 2 ಮತ್ತು 5 ನೇ ಆರೋಪಿತರು ನಟರಾಜ ರವರಿಗೆ ಹೆಚ್ಚಿನ ಮೊತ್ತ ನೀಡುತ್ತೇವೆ ಅಂತ ಹೇಳಿದ್ದರು ಅಂತ ಹೇಳಿದ ವಿಚಾರ ನನಗೆ ಗೊತ್ತಿಲ್ಲ. ನಟರಾಜ ರವರ ಅಕೌಂಟ ನು 1, 2 ಮತ್ತು 5 ನೇ ಆರೋಪಿತರು ಕ್ಲೋಸ್ ಮಾಡಿ ಅವರ ಹೆಸರಿಗೆ ಚಿನ್ನದ ನಾಣ್ಯದ ಮೇಲೆ ರೂ.1,92,900/ ಮಂಜೂರು ಮಾಡಿದ ವಿಚಾರ ನನಗೆ ಗೊತ್ತಿರುವುದಿಲ್ಲ. 5 ನೇ ಆರೋಪಿಯು ಚಿನ್ನದ ನಾಣ್ಯವನ್ನು ಮಾರಾಟ ಮಾಡುವ ಬಗ್ಗೆ ಡಿಸ್ಕೌಂಟ್ ಇರುವ ಬಗ್ಗೆ ನಮಗೆ ತಿಳಿಸಿರುತ್ತಾರೆ. ಡಿಸ್ಕೌಂಟ್ ಹಣದ ಬಗ್ಗೆ ಗ್ರಾಹಕರಿಗೆ ತಿಳಿಸುವುದು ಬೇಡ ನಿನ್ನ ಅಕೌಂಟ್ಗೆ ಹಾಕಿ ಮುಂದಿನದನ್ನು ನಾನು ನೋಡಿಕೊಳ್ಳುತ್ತೇನೆ ಅನ್ನುವ ವಿಚಾರ ನನ್ನ ಬಳಿ ಹೇಳಿರುವುದಿಲ್ಲ. ಈ ವಿಚಾರವಾಗಿ 3 ರಿಂದ 4 ಬಾರಿ ನನ್ನ ಅಕೌಂಟ್‌ಗೆ ಹಣ ಹಾಕಿ ನನ್ನಿಂದ ಚೆಕ್ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಈ ವಿಚಾರದ ಮೇಲೆ 5 ನೇ ಆರೋಪಿಯು ಬ್ಯಾಂಕಿನ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

2. ಆರೋಪಿತರೆಲ್ಲರೂ ಸೇರಿ ನನ್ನ, ಅನಿತಾ ಹಾಗೂ ಜಯ್ಯಣ್ಣ ರವರೊಂದಿಗೆ ಚರ್ಚಿಸುತ್ತಿರಲಿಲ್ಲ. ಇವರುಗಳೆಲ್ಲ ನಮ್ಮನ್ನು ಬ್ಯಾಂಕ್ ನಿಂದ ಹೊರಗಡೆ ಕಳುಹಿಸುತಿದ್ದರು, ಇವರೆಲ್ಲಾರೂ ಸೇರಿಕೊಂಡು ಬ್ಯಾಂಕಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಒಳಸಂಚನ್ನು ರೂಪಿಸಿ ಸುಮಾರು 34 ಜುಯಲ್ ಲೋನ್ ಗಳಿಗೆ ಸಂಬಂದಿಸಿದಂತೆ ರೂ.1,58,74,571/ ರೂ ಹಣವನ್ನು ಬ್ಯಾಂಕಿನಿಂದ ತಮ್ಮ ಸ್ವಂತಕ್ಕೆ ಬಳಸಿಕೊಂಡು ಮೋಸ ಮಾಡಿದ ವಿಚಾರ ನನಗೆ ಗೊತ್ತಿರುವುದಿಲ್ಲ. ಆರೋಪಿತರು ಹೇಗೆ ಮೋಸ

ಮಾಡಿದರು ಅನ್ನುವ ವಿಚಾರವೂ ಸಹ ನನಗೆ ಗೊತ್ತಿರುವುದಿಲ್ಲ. ಈ ವಿಷಯವಾಗಿ ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

**( ಈ ಹಂತದಲ್ಲಿ ಸ.ಸ. ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲು : ಸ.ಸ. ಅಭಿಯೋಜಕರಿಂದ**

3. ನಾನು 28.06.2010 ರಿಂದ ಚಿತ್ರದುರ್ಗದ ಐಸಿಐಸಿಐ ಬ್ಯಾಂಕ್ ನಲ್ಲಿ ಕೆಲಸ ನಿರ್ವಹಿಸುತ್ತಿರುವಾಗ ನಾನು ನಟರಾಜ ಚಿತ್ರದುರ್ಗ ಎಂಬ ವ್ಯಕ್ತಿಯ ಅಕೌಂಟನ್ನು ಮಾಡಿಸಿದ್ದೆನು ಎಂದರೆ ಸರಿ. ಅವರ ಅಕೌಂಟ ನಂಬರ್ 142401500042 ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಈ ವಿಚಾರವಾಗಿ ಆರೋಪಿತರು ದಿಃ26.10.2011 ರಂದು ನಾನು ಬ್ಯಾಂಕಿನಲಿ ರುವಾಗ ನಟರಾಜ್ ರವರು 100 ಗ್ರಾಂ ಚಿನ್ನದ ನಾಣ್ಯವನ್ನು ಕೊಂಡುಕೊಳಳಲು ಬಂದಿದ್ದರು ಎಂದರೆ ಸರಿಯಲ್ಲ. ಅವರ ಹತ್ತಿರ ಒಂದು ಲಕ್ಷ ರೂಗಳು ಇದ್ದುದರಿಂದ ಸದರಿ ಹಣವನ್ನು ಅಕೌಂಟಿಗೆ ಜಮಾ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ನಟರಾಜ ಹತ್ತಿರ ಹೆಚ್ಚಿನ ಮೊತ್ತದ ಹಣ ಇಲ್ಲದ್ದರಿಂದ 1,2,5 ನೇ ಆರೋಪಿತರು ನಟರಾಜ ರವರಿಗೆ ಮಾರಾಟ ಮಾಡಿದ ಹಾಗೆ ಮಾಡಿಕೊಂಡು ಸದರಿ ಚಿನ್ನದ ಹಣಕ್ಕೆ ನಟರಾಜ ರವರ ಹಣಕ್ಕೆ ರೂ.1,81,500/ ಜುಯಲ್ ಲೋನ್ ಮಂಜೂರು ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಚಿನ್ನದ ನಾಣ್ಯವನ್ನು ನಟರಾಜ್ ರವರಿಗೆ ಮಾರಾಟ ಮಾಡಿದ ಬಗ್ಗೆ ಬ್ಯಾಂಕ್ ನಲ್ಲಿ ನಮೂದು ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನಟರಾಜ ರವರು ಸದರಿ ಮೊತ್ತವು ನನಗೆ ಸಾಕಾಗುವುದಿಲ್ಲ ಇನ್ನು ಹೆಚ್ಚಿನ ಮೊತ್ತದ ಹಣ ಬೇಕು ಎಂದು ಕೇಳಿದ್ದರಿಂದ 1,5,4 ನೇ ಆರೋಪಿತರು ಒಂದು ತಿಂಗಳ ನಂತರ ಚಿನ್ನದ ಬೆಲೆ ಜಾಸ್ತಿಯಾಗುತ್ತದೆ ಆಗ ಇನ್ನು ಹೆಚ್ಚಿನ ಮೊತ್ತದ ಹಣವನ್ನು ನಾವು ಕೊಡುತ್ತೇವೆ ಅಂತ ಹೇಳಿದರು ಎಂದರೆ ಸರಿಯಲ್ಲ. ಈ ರೀತಿಯಾಗಿ ದಿಃ17.11.2011 ರಂದು ಸದರಿ

ಆರೋಪಿಗಳು ಸೇರಿಕೊಂಡು ನಟರಾಜ ಇವರ ಜುಯಲ್ ಲೋನ್ ಅಕೌಂಟ್ ಕ್ಲೋಸ್ ಮಾಡಿ 100 ಗ್ರಾಂ ಚಿನ್ನದ ನಾಣ್ಯವನ್ನು ಮಾರಾಟ ಮಾಡಿದ ಬಗ್ಗೆ ನಮೂದು ಮಾಡಿಕೊಂಡು ಅದೇ ಚಿನ್ನದ ನಾಣ್ಯದ ಮೇಲೆ ಜುಯಲ್ ಲೋನ್ ಅಕೌಂಟ್ ನಂಬರ್ 142405000758 ಅಕೌಂಟ್ ಓಪನ್ ಮಾಡಿ ರೂ. 1,92,900/ ರೂಗಳನ್ನು ಮಂಜೂರು ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

4. ದಿಃ 04.11.2011 ರಂದು 5 ನೇ ಆರೋಪಿಯು ನನ್ನನ್ನು ಕರೆದು ಗ್ರಾಹಕರಿಗೆ ಚಿನ್ನದ ನಾಣ್ಯವನ್ನು ಮಾರಾಟ ಮಾಡುವ ಬಗ್ಗೆ ಡಿಸ್ಕೌಂಟ್ ಕೇಳುತ್ತಾರೆ ಆದ್ದರಿಂದ ನಿನ್ನ ಅಕೌಂಟ್ ಗೆ ಹಣವನ್ನು ಹಾಕಿ ನಂತರ ಆ ಹಣದಿಂದ ಚಿನ್ನದ ನಾಣ್ಯವನ್ನು ಪಡೆದು ಗ್ರಾಹಕರಿಗೆ ಡಿಸ್ಕೌಂಟ್‌ನಲ್ಲಿ ಚಿನ್ನದ ನಾಣ್ಯವನ್ನು ಮಾರಾಟ ಮಾಡುತ್ತೇವೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ . ಅದಕ್ಕೆ ನಾನು ನನ್ನ ಅಕೌಂಟ್ಗೆ ಹಣವನ್ನು ಹಾಕವುದು ಬೇಡ ಎಂದರೂ ಏನು ಆಗುವುದಿಲ್ಲ ನಾನು ಎಲ್ಲವನ್ನು ನೋಡಿಕೊಳ್ಳುತ್ತೇನೆ ಅಂತ ಹೇಳಿರುತ್ತಾರೆ ಎಂದರೆ ಸರಿ . ಆಗ ನನ್ನ ಮನಸ್ಸಿಗೆ ಒಪ್ಪಿಗೆ ಇಲ್ಲದಿದ್ದರು ನನ್ನ ಮೇಲಿನ ಅದಿಕಾರಿಗಳ ಮಾತನ್ನು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿ . ಅದೇ ದಿನ ಒಂದು ಬಾರಿ ನನ್ನ ಅಕೌಂಟ್ ಗೆ ರೂ 2,12,800/ ರೂಗಳನ್ನು ಮತ್ತು ಇನ್ನೊಂದು ಬಾರಿ ರೂ 21,700/ ರೂಗಳನ್ನು ಹಾಕಿರುತ್ತಾರೆ ಎಂದರೆ ಸರಿ . ನಂತರ ನನ್ನಿಂದ ಚೆಕ್ ಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ . ಅದೇರೀತಿ ದಿಃ 24.11.2011 ರಂದು ಪುನಃ ನನ್ನ ಅಕೌಂಟ್ ಗೆ ರೂ.1,30,828/ ರೂಗಳನ್ನು ಹಾಕಿ ನನ್ನಿಂದ ರೂ.1,30,828/ ರೂಗಳಿಗೆ ಚೆಕ್ ನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ . ಇದನ್ನು ನೋಡಿದಾಗ 5 ನೇ ಆರೋಪಿಯು ಬ್ಯಾಂಕಿನ ಹಣವನ್ನು ದುರುಪಯೋಗ ಪಡಿಸಿಕೊಂಡಿರುವ ವಿಚಾರ ನನಗೆ ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ಬ್ಯಾಂಕ್ ನಲ್ಲಿ ಆರೋಪಿತರೆಲ್ಲರೂ ನನ್ನ ಮತ್ತು ಜಯ್ಯಣ್ಣರೊಂದಿಗೆ ಚರ್ಚಿಸುತ್ತಿರಲಿಲ್ಲ ಇವರುಗಳು ಏನಾದರೂ ಚರ್ಚೆ ಮಾಡುವಾಗ ನಮ್ಮನ್ನೆಲ್ಲಾ ಹೊರಗಡೆ

ಕಳುಹಿಸುತಿದ್ದರು ಎಂದರೆ ಸರಿ . ಗೋಲ್ಡ್ ಲೋನ್ ವಿಷಯಕ್ಕೆ ಸಂಬಂದಿಸಿದಂತೆ ವಿಚಾರ ತಿಳಿಯಲಾಗಿ ಆರೋಪಿತರೆಲ್ಲರೂ ಸೇರಿಕೊಂಡು ಬ್ಯಾಂಕ್ ನಲ್ಲಿ ಒಳಸಂಚು ನಡೆಸಿ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು 34 ಜುಯಲ್ ಲೋನ್ ಗಳಿಗೆ ಸುಮಾರು ರೂ.1,58,74,571/ ರೂಗಳನ್ನು ಮಂಜೂರು ಮಾಡಿಕೊಂಡು ತಮ್ಮ ಸ್ವಂತಕ್ಕೆ ಬಳಸಿಕೊಂಡು ಬ್ಯಾಂಕಿಗೆ ಮೋಸ ಮಾಡಿರುತ್ತಾರೆ ಎಂದರೆ ಈ ವಿಚಾರ ನನಗೆ ಗೊತ್ತಿರುವುದಿಲ್ಲ. ನಾನು ಪೊಲೀಸರ ಮುಂದೆ ದಿಃ 17.03.2012 ರಂದು ಸಾಕ್ಷಿಗೆ ಈಗ ಓದಿ ಹೇಳಲಾದಂತಹ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ.124 ಎಂದು ಗುರುತಿಸಲಾಯಿತು. ಆರೋಪಿತರೆಲ್ಲರನ್ನು ನಾನು ನೋಡಿ ಗುರುತಿಸಿದ್ದರೂ ಸಹ ಬ್ಯಾಂಕ್ ನಲಿ ನಾನು ಅವರೊಟ್ಟಿಗೆ ಕೆಲಸ ಮಾಡಿದ್ದರೂ ಸಹ ಅವರಿಗೆ ಸಹಾಯ ಮಾಡಲು ನನಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 5 ನೇ ಆರೋಪಿಯ ಪರ ಶ್ರೀಮತಿ ಡಿ ಕೆ ಎಸ್ ವಕೀಲರಿಂದ**

5. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಬಗ್ಗೆ 5 ನೇ ಆರೋಪಿಗೆ ಸದರಿ ವಿಷಯದ ಬಗ್ಗೆ ತಿಳಿಸುತಿದ್ದೆನು ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. 5 ನೇ ಆರೋಪಿಯು ಚಿನ್ನದ ನಾಣ್ಯವನ್ನು ಮಾರಾಟ ಮಾಡುವ ಬಗ್ಗೆ ಡಿಸ್ಕೌಂಟ್ ಇರುವ ಬಗ್ಗೆ ನಮಗೆ ತಿಳಿಸಿರುತ್ತಾರೆ ಅಂತ ಹೇಳಿದ ಬಗ್ಗೆ ಬರವಣಿಗೆ ಮೂಲಕ ಹೇಳಿದ್ದಾರಾ ಎಂದರೆ ಇಲ್ಲ. ಆ ರೀತಿ ಹೇಳಿದ ಬಗ್ಗೆ ದಿನಾಂಕ, ತಿಂಗಳು, ಇಸವಿ ಗೊತ್ತಾ ಎಂದರೆ ಇಲ್ಲ. ಇನ್ವೆಸ್ಟಿಗೇಶನ್ ಆಫೀಸರ್ ರವರಿಗೆ ದಾಖಲೆ ಕೊಟ್ಟಿದ್ದೀರಾ ಎಂದರೆ ಇಲ್ಲ. 3 ರಿಂದ 4 ಬಾರಿ ನನ್ನ ಅಕೌಂಟ್‌ಗೆ ಹಣ ಹಾಕಿ ನನ್ನಿಂದ ಚೆಕ್ ಪಡೆದಕೊಂಡಿರುತ್ತಾರೆ ಅಂತ ಹೇಳಿದ ಬಗ್ಗೆ ಚೆಕ್ ನ ನಂಬರ್ , ದಿನಾಂಕ ಮತ್ತು ಹಣ ಹೇಳಲು ಆಗುತ್ತಾ ಎಂದರೆ ಇಲ್ಲ ನೆನಪಿಲ್ಲ.

ನಮ್ಮ ಖಾತೆಗೆ ಹಣ ಹಾಕಿದ ಬಗ್ಗೆ ಪಾಸ್ ಶೀಟ್ ಹಾಜರು ಮಾಡಿದ್ದೀರಾ ಎಂದರೆ ಇಲ್ಲ. ನಾವು ಅವರಿಗೆ ಹಣ ವಾಪಸ್ಸು ನೀಡಿದ ಬಗ್ಗೆ ರಶೀದಿ ಪಡೆದುಕೊಂಡಿಲ್ಲ. ಆರೋಪಿತರೆಲ್ಲರೂ ಸೇರಿ ನನ್ನ, ಅನಿತಾ ಹಾಗೂ ಜಯ್ಯಣ್ಣ ರವರೊಂದಿಗೆ ಚರ್ಚಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮನ್ನು ಹೊರಗಡೆ ಕಳುಹಿಸುತಿದ್ದರು ಎಂದರೆ ಹೌದು. 5 ನೇ ಆರೋಪಿಯ ಯಾವುದೇ ಪಾತ್ರ ಇಲ್ಲದಿದ್ದರೂ ಅವರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಘಟನೆ ನಡೆದಾಗ ಆರೋಪಿ ಮ್ಯಾನೇಜರ್ ಆಗಿರಲಿಲ್ಲ ಎಂದರೆ ಸರಿಯಲ್ಲ. 14.11.2011 ರಂದು ಬ್ಯಾಂಕ್ ನಿಂದ ರಾಜಿನಾಮೆ ಕೊಟ್ಟು ಹೋಗಿದ್ದಾರೆ ಎಂದರೆ ನೆನಪಿಲ್ಲ. 04.11.2011 ಅವರು ಗ್ರೇಸ್ ಪಿರಿಯಡ್ ನಲ್ಲಿ ಇದ್ದರು ಎಂದರೆ ಗೊತ್ತಿಲ್ಲ. ಆಗಾಗಲೇ ಅವರು ರಾಜಿನಾಮೆ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಹೊಸದಾಗಿ ಬಂದ ವ್ಯಕ್ತಿಗೆ ಟ್ರೆನಿಂಗ್ ಕೊಡುವ ಸಲುವಾಗಿ 5 ನೇ ಆರೋಪಿ ಬ್ಯಾಂಕ್ ನಲ್ಲಿ ಇದ್ದರು ಎಂದರೆ ಸರಿಯಲ್ಲ. ಆ ಕಾರಣದಿಂದ 5 ನೇ ಆರೋಪಿ ಯಾವುದೇ ಟ್ರಾನ್ಸಾಕ್ಷನ್ ಖುದ್ದು ಮಾಡಲಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ಉಳಿದ ಆರೋಪಿಯ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.**

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**